ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.**

**ಸಿ.ಸಿ.ನಂ.575/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಕೆ. ಹೆಚ್. ಮಣಿಕಂಠ** | | |
| **ತಂದೆ:ಹೆಸರು** | **ಕೆ. ಹೆಚ್. ಸೋಮಶೇಖರ್** | **ಪಿಡಬ್ಲೂ:** | **10** |
| **ವಯಸ್ಸು** | **31 ವರ್ಷ** | **ಸಿಡಬ್ಲೂ:** | **12** |
| **ಉದ್ಯೋಗ:** | **ಪಿ. ಎಸ್. ಐ,** | | |
| **ವಾಸ ಸ್ಥಳ:** | **ಹೂವಿನ ಹಡಗಲಿ, ವಿಜಯನಗರ ಜಿಲ್ಲೆ.** | | |

**ದಿನಾಂಕ 11-05-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ::**

ಈ ದಿನ ನ್ಯಾಯಾಲಯದಲ್ಲಿ 2 ರಿಂದ 4 ನೇ ಆರೋಪಿತರು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ನಾನು ದಿ.12-12-2020 ರಿಂದ ದಿ.31-01-2023 ರವರೆಗೆ ಮತ್ತು ದಿ.05-06-2023 ರಿಂದ 04-08-2023 ರವರೆಗೆ ಸಿಂಧನೂರು ಗ್ರಾಮಾಂತರ ಠಾಣೆಯಲ್ಲಿ ಪಿ. ಎಸ್. ಐ ಅಂತಾ ಕರ್ತವ್ಯ ನಿರ್ವಹಿಸಿದ್ದೇನೆ.

ತನಿಖೆ ಪೂರ್ಣಗೊಂಡಿದ್ದು, ದಾಖಲೆಗಳನ್ನು ಪರಿಶೀಲಿಸಿ, ಆರೋಪಿತರ ವಿರುದ್ಧ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಆರೋಪಿತರು & ಮು. ಮಾ. ಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು. ಮಾ. ಗಳನ್ನು ನೋಡಿ ಗುರುತಿಸಿರುತ್ತಾರೆ.

ಈ ಪ್ರಕರಣದಲ್ಲಿ ವೈದ್ಯರ ಹೆಸರು ಕೋನಿಕ ಎಂದು ನಮೂದಾಗಬೇಕಿತ್ತು, ಅದು ತಪ್ಪಾಗಿ ಗಂಗಾಧರ್ ಎಂದು ನಮೂದಾಗಿರುತ್ತದೆ. ಈ ಪ್ರಕರಣ ಕೌಂಟರ್ ಪ್ರಕರಣ ಆಗಿದ್ದು, ಆ ಪ್ರಕರಣದಲ್ಲಿ ಮತ್ತು ಈ ಪ್ರಕರಣದಲ್ಲಿ ಕಣ್ತಪ್ಪಿನಿಂದ ಅದಲುಬದಲಾಗಿ ನಮೂದಾಗಿರುತ್ತದೆ. ಚಾಸಾ-7 ರವರ

ಹೆಸರು ಬಾಲಪ್ಪ ತಂದೆ ಈರಪ್ಪ ಎಂದು ಸಾಕ್ಷಿದಾರರ ಪಟ್ಟಿಯಲ್ಲಿ ಸರಿಯಾಗಿ ನಮೂದಿರುತ್ತದೆ, ಆದರೆ ಸಾಕ್ಷಿದಾರರ ಹೇಳಿಕೆಯಲ್ಲಿ ಅದು ಬಾಲಪ್ಪ ತಂದೆ ಬಸಪ್ಪ ಎಂದು ತಪ್ಪಾಗಿ ನಮೂದಾಗಿರುತ್ತದೆ. ಚಾಸಾ-9 ರವರ ಹೆಸರು ಬುಡ್ಡಪ್ಪ ತಂದೆ ಈರಪ್ಪ ಎಂದು ಸಾಕ್ಷಿದಾರರ ಪಟ್ಟಿಯಲ್ಲಿ ತಪ್ಪಾಗಿ ನಮೂದಾಗಿದ್ದು, ಆದರೆ ಅವರ ತಂದೆಯ ಹೆಸರು ನರಸಪ್ಪ ಎಂದು ಆಗಬೇಕಿತ್ತು. ಸದರಿ ಈರಣ್ಣ & ಬುಡ್ಡಪ್ಪ ಅಣ್ಣತಮ್ಮಂದಿರು. ಈ ಬಗ್ಗೆ ಮನವಿಯನ್ನು ನನ್ನ ಹಿಂದಿನ ತನಿಖಾಧಿಕಾರಿ ಕೊಟ್ಟಿರುತ್ತಾರೆ.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದಃ**

1. ನಾನು ನನ್ನ ಅಂತಿಮ ವರದಿಯೊಂದಿಗೆ ರೆಡ್ಡೆಪ್ಪ ರವರ ಗಾಯದ ಪ್ರ.ಪತ್ರ ಕೊಟ್ಟಿರುವುದಿಲ್ಲ. ದಿ.04-12-2022 ರಂದು ಚಾಸಾ-4 ರಿಂದ 6 ರವರು ನಮ್ಮ ಠಾಣೆಗೆ ಬಂದಿರುವುದಿಲ್ಲ ಎಂದರೆ ಸಾಕ್ಷಿಯು ಆ ಕಾಲಕ್ಕೆ ನಾನು ಠಾಣೆಯಲ್ಲಿ ಕರ್ತವ್ಯದಲ್ಲಿರಲಿಲ್ಲ ಏಕೆಂದರೆ ನಾನು ಡಿಸೆಂಬರ್ ತಿಂಗಳಲ್ಲಿ ಬಂದಿರುತ್ತೇನೆ ಎನ್ನುತ್ತಾರೆ. ಅಂತಿಮ ವರದಿ ಸಲ್ಲಿಸುವುದಕ್ಕಿಂತ ಮುಂಚೆ ನಾನು ಸ್ಥಳಕ್ಕೆ ಭೇಟಿ ನೀಡಿಲ್ಲ. ದಿ.04-11-2022 ರಂದು ಈ ಕೇಸ್ ಗೆ ಸಂಬಂಧಿಸಿದಂತೆ ಎಂ ಎಲ್ ಸಿ ಬಂದಿತ್ತಾ ಎಂದರೆ ಸಾಕ್ಷಿಯು ಆ ಕಾಲಕ್ಕೆ ನಾನು ಠಾಣೆಯಲ್ಲಿ ಕರ್ತವ್ಯದಲ್ಲಿರಲಿಲ್ಲ ಏಕೆಂದರೆ ನಾನು ಡಿಸೆಂಬರ್ ತಿಂಗಳಲ್ಲಿ ಬಂದಿರುತ್ತೇನೆ ಎನ್ನುತ್ತಾರೆ.

2. ಅಂತಿಮ ವರದಿ ಸಲ್ಲಿಸುವುದಕ್ಕಿಂತ ಮುಂಚೆ ಎಲ್ಲವನ್ನೂ ನೋಡಿ ಸಲ್ಲಿಸಬೇಕು ಎಂದರೆ ಸರಿ. ಆರೋಪಿತರು ಯಾವುದೇ ತಪ್ಪು ಮಾಡಿಲ್ಲದೇ ಇದ್ದರೂ ಸಹ ಚಾಸಾ-1 ರವರ ಮಾತು ಕೇಳಿ ಸುಳ್ಳು ಅಂತಿಮ ವರದಿಯನ್ನು ಅವರಿಗೆ ಅನುಕೂಲ ಮಾಡುವ ಸಲುವಾಗಿ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ.

**ನ್ಯಾಯಾಲಯದ ಪ್ರಶ್ನೆ:**

ಪ್ರಶ್ನೆ:1 ಸಾಕ್ಷಿದಾರರನ್ನು ವಿಚಾರಣೆ ಮಾಡುವುದಕ್ಕಿಂತ ಮುಂಚೆ ಅವರಿಗೆ ನೋಟೀಸನ್ನು ಕೊಟ್ಟು ಕರೆಸುತ್ತೀರಿ?

ಉ: ಸರಿ.

ಪ್ರಶ್ನೆ:2 ಆ ನೋಟೀಸಿಗೆ ನೀವು ಸಹಿ ಮಾಡಿರುತ್ತೀರಿ?

ಉ: ಸಾಕ್ಷಿಯು ತನಿಖಾಧಿಕಾರಿ ಸಹಿ ಮಾಡುತ್ತಾರೆ ಎನ್ನುತ್ತಾರೆ.

ಪ್ರಶ್ನೆ:3 ಖಾಲಿ ಹಾಳೆಗೆ ನೀವು ಸಾಕ್ಷಿದಾರರ ಸಹಿ ಪಡೆಯುವುದಿಲ್ಲ?

ಉ: ಸಾಕ್ಷಿಯು ನಾನು ಪಡೆಯುವುದಿಲ್ಲ ಎನ್ನುತ್ತಾರೆ.

ಪ್ರಶ್ನೆ:4 ಸಾಕ್ಷಿಗೆ ಕಡತದಲ್ಲಿರುವ ಬಾಲಪ್ಪ ಎಂಬ ವ್ಯಕ್ತಿ ಸಹಿ ಮಾಡಿದ ನೋಟೀಸಿನ ಪ್ರತಿಯನ್ನು ತೋರಿಸಿ, ಹಾಗೆಂದರೆ ನೋಟೀಸಿನ ಫಾರ್ಮೆಟ್ ಹಾಳೆಗೆ ಏಕೆ ಸಾಕ್ಷಿದಾರರ ಸಹಿ ಪಡೆದಿದ್ದು?

| | |
|---|---|
| ಉ: | ನನ್ನ ಹಿಂದಿನ ತನಿಖಾಧಿಕಾರಿ ಈ ತಪ್ಪು ಮಾಡಿರುತ್ತಾರೆ, ನಾನು ನಜರ್‌ಚುಕಿನಿಂದ ನ್ಯಾಯಾಲಯಕ್ಕೆ ಸಲ್ಲಿಸಿದ್ದೆ. |
| ಪ್ರಶ್ನೆ:5 | ಈ ಪ್ರಕರಣದಲ್ಲಿ ನೀವು ಸಲ್ಲಿಸಿರುವ ಸಾಕ್ಷಿದಾರರಿಗೆ ಯಾರು ಹೇಗೆ ಸಂಬಂಧ ಪಡುತ್ತಾರೆಂದು ಹೇಳಲು ಬರುತ್ತದೆಯೇ? |
| ಉ: | ಬರುತ್ತದೆ. |
| ಪ್ರಶ್ನೆ:6 | ಚಾಸಾ-4 ರವರಿಗೂ ಚಾಸಾ-6 ರವರಿಗೂ ಏನು ಸಂಬಂಧ? |
| ಉ: | ಚಾಸಾ-4 ರವರ ತಂದೆ ಚಾಸಾ-6 ಎನ್ನುತ್ತಾರೆ. |
| ಪ್ರಶ್ನೆ:7 | ರೆಡ್ಡೆಪ್ಪ ರವರ ಗಾಯದ ಪ್ರ.ಪತ್ರ ಪಡೆಯದೆ ಇದ್ದರೆ, ನಿಮ್ಮ ಅಂತಿಮ ವರದಿಯ ಕಾಲಂ. ನಂ.22 ರಲ್ಲಿ ಏಕೆ ನಮೂದು ಇದೆ? |
| ಉ: | ಸಾಕ್ಷಿಯು ನನ್ನ ಹಿಂದಿನ ಅಧಿಕಾರಿ ಪಡೆದಿದ್ದೆ ಎಂದು ಹೇಳಿದ್ದರು, ಆದ್ದರಿಂದ ಸೇರಿಸಿದ್ದೆ, ಆದರೆ ಕಡತದಲ್ಲಿ ಅದು ಲಭ್ಯವಿರುವುದಿಲ್ಲ & ಲಭ್ಯವಿಲ್ಲದೇ ಇರುವುದನ್ನು ನಜರ್‌ಚುಕಿನಿಂದ ನಮೂದಿಸಿದ್ದೆ ಎನ್ನುತ್ತಾರೆ. |
| ಪ್ರಶ್ನೆ:8 | ಅಂದರೆ ನಿಮ್ಮ ಪ್ರಕಾರ ರೆಡ್ಡಪ್ಪರವರಿಗೆ ಚಿಕಿತ್ಸೆ ಆಗಿಲ್ಲ? |
| ಉ: | ಸಾಕ್ಷಿಯು ಆಗಿದೆ ಎನ್ನುತ್ತಾರೆ. |
| ಪ್ರಶ್ನೆ:9 | ರೆಡ್ಡಪ್ಪ ರವರ ತಂದೆಯ ಹೆಸರು ಏನು? |
| ಉ: | ರೆಡ್ಡಪ್ಪನ ತಂದೆಯ ಹೆಸರು ಬಸಪ್ಪ. |
| ಪ್ರಶ್ನೆ:10 | ಬಸಪ್ಪನಿಗೂ ಪರಸಪ್ಪನಿಗೂ ಬಹಳ ವ್ಯತ್ಯಾಸವಿದೆ? |
| ಉ: | ಹೌದು. |
| ಪ್ರಶ್ನೆ:11 | ಈ ಪ್ರಕರಣದಲ್ಲಿರುವ ನ್ಯೂನ್ಯತೆಗಳ ಬಗ್ಗೆ ಹೇಗೆ ನಿಮ್ಮ ಗಮನಕ್ಕೆ ಬಂದಿರುತ್ತದೆ? |
| ಉ: | ಸಾಕ್ಷಿಯು ಈ ಪ್ರಕರಣದಲ್ಲಿ ಸಾಕ್ಷಿ ಹೇಳುವುದಕ್ಕೆ ಬರುವುದಕ್ಕಿಂತ ಮುಂಚೆ ನೋಡಿದ್ದೆ ಎನ್ನುತ್ತಾರೆ. |

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**C/c 2 ನೇ ಅಪರ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ., ಸಿಂಧನೂರು.**